# ಕನ್ನಡ ವಿಶ್ವವಿದ್ಯಾಲಯ, ಹಂಪಿ

# ಹಾಲುಮತ ಅಧ್ಯಯನ ಪೀಠ

### ಹಾಲುಮತ 9ನೇ ಉಪನ್ಯಾಸ ಮಾಲೆ

## ಹಾಲುಮತ ಸಾಂಸ್ಕೃತಿಕ ಪದಕೋಶ : ಸ್ವರೂಪ ಮತ್ತು ಆಶಯ

## ಹಾಲುಮತ ಜಾತಿಯಲ್ಲ ಅದೊಂದು ಸಮುದಾಯ : ನಿಂಗರಾಜ ಉಳ್ಳಾಗಡ್ಡಿ

ಹಾಲುಮತ ಬರೀ ಜಾತಿಯಲ್ಲ ಅದೊಂದು ಸಮುದಾಯ, ವಿಶಿಷ್ಟ ಸಂಸ್ಕೃತಿ, ವೈವಿಧ್ಯಮಯ ಆಚರಣೆ, ಸಂಪ್ರದಾಯಗಳನ್ನು ಹೊಂದಿರುವ ನಾಡಿನ ಸಂಸ್ಕೃತಿಕ ಪ್ರತೀಕವಾಗಿದೆ ಎಂದು ಕನ್ನಡ ವಿಶ್ವವಿದ್ಯಾಲಯ ಹಸ್ತಪ್ರತಿಶಾಸ್ತ್ರ ವಿಭಾಗದ ಸಂಶೋಧನಾ ವಿದ್ಯಾರ್ಥಿಯಾದ **ನಿಂಗರಾಜ ಉಳ್ಳಾಗಡ್ಡಿ** ಅವರು ಅಭಿಪ್ರಾಯಪಟ್ಟರು.




ಹಸ್ತಪ್ರತಿಶಾಸ್ತ್ರ ವಿಭಾಗದ ಸಂಶೋಧನಾ ವಿದ್ಯಾರ್ಥಿಯಾದ ನಿಂಗರಾಜ ಉಳ್ಳಾಗಡ್ಡಿ ಹಾಲುಮತ 9ನೇ ಉಪನ್ಯಾಸ ಮಾಲೆಯ ಹಾಲುಮತ ಸಾಂಸ್ಕೃತಿಕ ಪದಕೋಶ : ಸ್ವರೂಪ ಮತ್ತು ಆಶಯ ಎಂಬ ಉಪನ್ಯಾಸ ನೀಡಿದರು.

ಕನ್ನಡ ವಿಶ್ವವಿದ್ಯಾಲಯದ **ಹಾಲುಮತ ಅಧ್ಯಯನ ಪೀಠ** ವತಿಯಿಂದ **ಹಾಲುಮತ 9ನೇ ಉಪನ್ಯಾಸ ಮಾಲೆಯ ಹಾಲುಮತ ಸಾಂಸ್ಕೃತಿಕ ಪದಕೋಶ : ಸ್ವರೂಪ ಮತ್ತು ಆಶಯ** ಎಂಬ ಉಪನ್ಯಾಸ ನೀಡುತ್ತಾ ಹಾಲುಮತ ಸಮುದಾಯದವರು ಸದಾ ನಿಸರ್ಗದಲ್ಲಿದ್ದು, ಸಾಹಿತ್ಯ, ಸಂಸ್ಕೃತಿ, ಕಲೆ ಹಾಗೂ ಹಬ್ಬ ಆಚರಣೆಗಳಿಗೆ ತಮ್ಮದೇ ಕೊಡುಗೆ ನೀಡಿದ್ದು, ಇದು ಸಾಮಾಜಿಕ ಪ್ರಜ್ಞೆಗೆ ನಿದರ್ಶನಗಳಲ್ಲಿ ಒಂದು ಎನ್ನುವಂತೆ ಬೆಳೆದು ಬಂದಿದೆ ಎಂದು ತಿಳಿಸಿದರು.

ಇನ್ನೂ ಹಾಲುಮತ ಅಧ್ಯಯನ ಪೀಠದ ಸಂಚಾಲಕರಾದ **ಡಾ. ಎಫ್.ಟಿ. ಹಳ್ಳಿಕೇರಿ** ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿಕೊಂಡು ಮಾತನಾಡುತ್ತ ಕುರುಬ ಸಮುದಾಯ ಪದಕೋಶವನ್ನು ರಚಿಸುವ ಅವಶ್ಯಕತೆ ಇದ್ದು, ಸಮುದಾಯದ ಚರಿತ್ರೆ ನಿರ್ಮಾಣ ಆಗಬೇಕಿದೆ. ಈ ನಿಟ್ಟಿನಲ್ಲಿ ಕನ್ನಡ ವಿಶ್ವವಿದ್ಯಾಲಯವು ಅನೇಕ ರೀತಿಯ ಕಾರ್ಯಕ್ರಮಗಳನ್ನು ಮಾಡುತ್ತಾ ಬಂದಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ವಿವಿಧ ವಿಭಾಗದ ಮುಖ್ಯಸ್ಥರು, ಅಧ್ಯಾಪಕರು, ಆಡಳಿತ ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.




ಹಾಲುಮತ ಅಧ್ಯಯನ ಪೀಠದ ಸಂಚಾಲಕರಾದ ಡಾ. ಎಫ್.ಟಿ. ಹಳ್ಳಿಕೇರಿ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.